## ಕರ್ನಾಟಕ ಸರ್ಕಾರದ ನಡವಳಿಗಳು

***ವಿಷಯ:-*** ಶ್ರೀ ರವಿಕುಮಾರ್, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಗಂಗಾವತಿ ಇವರ ವಿರುದ್ಧದ ಇಲಾಖಾ ವಿಚಾರಣೆಯಲ್ಲಿ ಸಾಭೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸುವ ಬಗ್ಗೆ -ಆದೇಶ.

***ಓದಲಾಗಿದೆ***

*1.* ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರ ಪತ್ರ ಸಂಖ್ಯೆ:ಜಿಪಂಕೊ/ರಸ್ತೆ/ಅಭಿವೃದ್ಧಿ/5054/ಕ.ಕ್ಷೇತ್ರ/2012-13/ಸಿಸಿಎ/2015-16, ದಿ:11.8.2016.

*2.* ಸರ್ಕಾರದ ಕಾರಣ ಕೇಳುವ ನೋಟಿಸ್ ಸಂಖ್ಯೆ:ಗ್ರಾಅಪ 59 ಇಎನ್‌ಕ್ಯೂ 2016, ದಿನಾಂಕ:19.1.2017.

*3.* ಅಪಾದಿತರ ವಿವರಣೆ ದಿನಾಂಕ:
   1. ಎಂ.ಎನ್.ಪಾಟೀಲ್, ದಿ:25.10.2017
   2. ರವಿಕುಮಾರ್, ದಿ:19.4.2017.

*4.* ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 59 ಇಎನ್‌ಕ್ಯೂ 2016, ದಿನಾಂಕ:16.01.2018,

*5.* ವಿಚಾರಣಾ ವರದಿ ದಿನಾಂಕ:19.3.2019.

*6.* 2 ನೇ ಕಾರಣ ಕೇಳುವ ನೋಟಿಸ್ ಸಂಖ್ಯೆ: ಗ್ರಾಅಪ 59 ಇಎನ್‌ಕ್ಯೂ 2016, ದಿ:26.4.2019.

*7.* ಆರೋಪಿತ ವಿವರಣೆ ದಿನಾಂಕ:
   ಶ್ರೀ ರವಿಕುಮಾರ್ ದಿ:15.6.2019.
   ಶ್ರೀ ಎಂ.ಎನ್.ಪಾಟೀಲ್ ದಿ:11.9.2019.
   ಶ್ರೀ ಎಸ್.ರವಿಪ್ರಸಾದ್, ದಿ:13.6.2019

***ಪ್ರಸ್ತಾವನೆ:-***

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ರವರು ಮೇಲೆ ಓದಲಾದ ಕ್ರಮಾಂಕ (1)ರ ದಿನಾಂಕ:11.8.2016 ರ ಪತ್ರದೊಂದಿಗೆ 2012-13 ನೇ ಸಾಲಿನಲ್ಲಿ ಕನಕಗಿರಿ ವಿಧಾನ ಸಭಾ ಕ್ಷೇತ್ರಕ್ಕೆ ಬಿಡುಗಡೆಯಾದ ವಿಶೇಷ ಅನುದಾನ 5054 ಯೋಜನೆಯಡಿ (ಲೆಕ್ಕ ಶೀರ್ಷಿಕೆ 5054-04-337-07-01-132 ಯೋಜನೆ) ರಸ್ತೆ ಡಾಂಬರೀಕರಣ ಯೋಜನೆ ಕಾಮಗಾರಿಯನ್ನು ಮಂಜೂರಾದ ಅಂದಾಜು ಪಟ್ಟಿಯ ಅನುಸಾರ ಅನುಷ್ಟಾನಗೊಳಿಸದೇ ಇದ್ದರೂ ಸಹ ಮಂಜೂರಾದ ಅಂದಾಜು ಪಟ್ಟಿಯನುಸಾರ ವಿವರಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿ, ಹಣ ದುರುಪಯೋಗಪಡಿಸಿಕೊಳ್ಳಲಾಗಿದೆ ಎಂದು ಆರೋಪಿಸಿ, ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ದ ಶಿಸ್ತುಕ್ರಮ ಕೈಗೊಳ್ಳಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು:-

1. **ಶ್ರೀ ರವಿ ಕುಮಾರ್, ಹಿಂದಿನ ಕಿ.ಇಂ, ಪಂ.ರಾ.ಇಂ ಉಪವಿಭಾಗ, ಗಂಗಾವತಿ.**
2. **ಶ್ರೀ ರವಿಪ್ರಸಾದ್, ಹಿಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಗಂಗಾವತಿ.**
3. **ಶ್ರೀ ಎಂ.ಎನ್.ಪಾಟೀಲ್, ಹಿಂದಿನ ಸ.ಕಾ.ಇಂ, ಪಂ.ರಾ.ಇಂ ಉಪವಿಭಾಗ, ಗಂಗಾವತಿ**

ಸರ್ಕಾರವು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಮೇಲ್ಕಂಡ ಮೂವರು ಅಧಿಕಾರಿ/ನೌಕರರ ವಿರುದ್ಧ ಆರೋಪಗಳು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಅವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ರಡಿ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಉದ್ದೇಶಿಸಿ, ಮೂವರು ಅಧಿಕಾರಿ/ನೌಕರರಿಗೆ ಮೇಲೆ ಓದಲಾದ ಕ್ರಮಾಂಕ (2) ರ ದಿನಾಂಕ:19.1.2017 ರಂದು ಕಾರಣ ಕೇಳುವ ನೋಟಿಸ್‌ನೊಂದಿಗೆ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿತ್ತು.

ಶ್ರೀ ರವಿಕುಮಾರ್, ಕಿರಿಯ ಇಂಜಿನಿಯರ್ ಮತ್ತು ಶ್ರೀ ಎಂ.ಎನ್.ಪಾಟೀಲ್, ಇವರ ಆರೋಪ ಪಟ್ಟಿಗೆ ಮೇಲೆ ಓದಲಾದ ಕ್ರಮಾಂಕ (3) ರಲ್ಲಿ ವಿವರಣೆಯನ್ನು ಸಲ್ಲಿಸಿ, ಆರೋಪಗಳನ್ನು ನಿರಾಕರಿಸಿ, ಅವರನ್ನು ದೋಷಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ. ಸಾಕಷ್ಟು ಕಾಲಾವಕಾಶ ನೀಡಿದ್ದಾಗ್ಯೂ, ಶ್ರೀ ಎಸ್.ರವಿಪ್ರಸಾದ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರ ವಿವರಣೆಯು ಸ್ವೀಕೃತವಾಗಿರುವುದಿಲ್ಲ.

ಶ್ರೀ ರವಿಕುಮಾರ್, ಕಿರಿಯ ಇಂಜಿನಿಯರ್ ಮತ್ತು ಶ್ರೀ ಎಂ.ಎನ್.ಪಾಟೀಲ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರುಗಳು ಸಲ್ಲಿಸಿರುವ ವಿವರಣೆಯನ್ನು ಹಾಗೂ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿ, ಮೇಲೆ ತಿಳಿಸಿರುವ ಅಧಿಕಾರಿ/ನೌಕರರ ವಿರುದ್ಧ ಕಂಡು ಬಂದಿದ್ದ ಆರೋಪಗಳ ಸತ್ಯಾಸತ್ಯತೆಯನ್ನು ಅರಿಯುವ ಸಲುವಾಗಿ ಮೇಲೆ ಓದಲಾದ ಕ್ರಮಾಂಕ(4) ರ ದಿನಾಂಕ:16.1.2018 ರ ಆದೇಶದಲ್ಲಿ ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಬಳ್ಳಾರಿ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು.

ವಿಚಾರಣಾಧಿಕಾರಿಗಳು ವಿವರವಾದ ವಿಚಾರಣೆಯನ್ನು ನಡೆಸಿ, ಮೇಲೆ ಓದಲಾದ ಕ್ರಮಾಂಕ (5) ರ ದಿನಾಂಕ:19.3.2019 ರಂದು ಸರ್ಕಾರಕ್ಕೆ ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಆರೋಪಿತರ ವಿರುದ್ಧದ ಆರೋಪಗಳು ಸಾಭೀತಾಗಿರುತ್ತವೆ. ವಿಚಾರಣಾ ವರದಿಯ ಕುರಿತು ಕ್ರಮ ಕೈಗೊಳ್ಳುವ ಪೂರ್ವದಲ್ಲಿ ಎಲ್ಲಾ ಮೂವರಿಗೆ ಮೇಲೆ ಓದಲಾದ ಕ್ರಮಾಂಕ(6) ರಂತೆ ವಿಚಾರಣಾ ವರದಿಯೊಂದಿಗೆ 2 ನೇ ಕಾರಣ ಕೇಳುವ ನೋಟಿಸ್ ಜಾರಿ ಮಾಡಲಾಗಿತ್ತು.

ಮೂವರು ಆರೋಪಿತರು ತಮ್ಮ ವಿವರಣೆಯನ್ನು ಮೇಲೆ ಓದಲಾದ ಕ್ರಮಾಂಕ (7) ರಂತೆ ಸಲ್ಲಿಸಿರುತ್ತಾರೆ. ಆಪಾದಿತರ ಪೈಕಿ ಶ್ರೀ ಎಂ.ಎನ್. ಪಾಟೀಲ್ ಮತ್ತು ಶ್ರೀ ಎಸ್.ರವಿಪ್ರಸಾದ್ ನಿವೃತ್ತ ಸ.ಕಾ.ಇಂಗಳು ಇವರು ಹಾಲಿ ಸೇವೆಯಿಂದ ನಿವೃತ್ತಿ ಹೊಂದಿದ್ದು ಅವರ ವಿರುದ್ಧ ಕ.ನಾ.ಸೇವಾ ನಿಯಮಗಳು 1958 ರ ನಿಯಮ 214 ರ ಅನುಸಾರ ದಂಡನೆ ವಿಧಿಸುವ ಅಗತ್ಯ ಇರುವುದರಿಂದ ಕರ್ನಾಟಕ ಲೋಕ ಸೇವಾ ಆಯೋಗದ ಪೂರ್ವಾನುಮತಿ ಅವಶ್ಯವಿರುತ್ತದೆ. ಆದ್ದರಿಂದ, ಈ ಇಬ್ಬರು ನಿವೃತ್ತ ಅಧಿಕಾರಿಗಳ ವಿರುದ್ಧ ಪ್ರತ್ಯೇಕವಾಗಿ ಪರಿಶೀಲಿಸಿ ಕ್ರಮವಹಿಸಲಾಗುತ್ತಿದೆ.

ಉಳಿದಂತೆ, ಶ್ರೀ ರವಿಕುಮಾರ್, ಕಿ.ಇಂ, ಪಂ.ರಾ.ಇಂ ಉಪವಿಭಾಗ, ಗಂಗಾವತಿ ಇವರಿಗೆ ಸಂಬಂಧಿಸಿದಂತೆ ಪರಿಶೀಲಿಸಲಾಗಿದ್ದು, ಶ್ರೀ ರವಿಕುಮಾರ್, ಕಿ.ಇಂ ಇವರ ವಿರುದ್ಧದ ಆರೋಪವೆಂದರೆ, 2012-13ನೇ ಸಾಲಿನಲ್ಲಿ ಕನಕಗಿರಿ ವಿದಾನಸಭಾ ಕ್ಷೇತ್ರಕ್ಕೆ ಲೆಕ್ಕ ಶೀರ್ಷಿಕೆ 5054 ಯೋಜನೆಯಡಿ ಕನಕಗಿರಿ ಮುಖ್ಯ ರಸ್ತೆಯಿಂದ ಮಲ್ಲಿಕವಾಡ ಗ್ರಾಮಕ್ಕೆ ಹೋಗುವ ರಸ್ತೆ ಡಾಂಬರೀಕರಣ ಕಾಮಗಾರಿ ಅನುಷ್ಠಾನಗೊಳಿಸುವಾಗ ಅಂದಾಜು ಪತ್ರಿಕೆಯನ್ವಯ 800.00ಮೀ ರಸ್ತೆ ಡಾಂಬರೀಕರಣ ಮಾಡಬೇಕಾದ

ಕಾಮಗಾರಿಯ ಪೈಕಿ 420.00 ಮೀ ರಸ್ತೆ ಮಾತ್ರ ಡಾಂಬರೀಕರಣ ಮಾಡಿ ಉಳಿದ 380.00 ಮೀ. ರಸ್ತೆ ಡಾಂಬರೀಕರಣ ಮಾಡದೇ ಗುತ್ತಿಗೆದಾರರಿಗೆ ರೂ. 2,03,279.00ಗಳಷ್ಟು ಹೆಚ್ಚುವರಿ ಹಣ ಪಾವತಿಸಿರುವ ಆರೋಪಗಳನ್ನು ಮಾಡಲಾಗಿರುತ್ತದೆ. ಅಂದರೆ, ಅಪಾದಿತ ಅಧಿಕಾರಿ/ನೌಕರರು 800 ಮೀಟರ್ ಪೈಕಿ ಕೇವಲ 420 ಮೀಟರ್ ರಸ್ತೆ ಡಾಂಬರೀಕರಣ ಮಾಡಿದ್ದು, ಮಾಡದೆ ಇದ್ದ 380 ಮೀಟರ್‌ಗೂ ಸಹ ಅಳತೆ ಪುಸ್ತಕದಲ್ಲಿ ವಿವರಗಳನ್ನು ನಮೂದಿಸಿ, ಪೂರ್ಣ ಹಣವನ್ನು ಗುತ್ತಿಗೆದಾರರಿಗೆ ಹಣಪಾವತಿಸಿರುವುದು ಸ್ಪಷ್ಟವಿರುತ್ತದೆ. ಆರೋಪಗಳ ಕಂಡು ಬಂದ ನಂತರ ಉಳಿದ ಕಾಮಗಾರಿಯನ್ನು ಅನುಷ್ಠಾನ ಮಾಡಿರುವುದು, ಒಂದು ವೇಳೆ ಪ್ರಕರಣ ಬೆಳಕಿಗೆ ಬಾರದಿದ್ದಲ್ಲಿ ಆಪಾದಿತರು ರೂ.2,03,279/-ಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದರು ಎಂಬ ಆರೋಪವು ಇಲಾಖಾ ವಿಚಾರಣೆಯಲ್ಲಿ ಸಾಭೀತಾಗಿರುತ್ತದೆ. ಈ ರೀತಿಯಾಗಿ ತಾತ್ಕಾಲಿಕ ಹಣ ದುರುಪಯೋಗಪಡಿಸಿಕೊಂಡಿರುವ ಆರೋಪವು ಸಾಭೀತಾಗಿದ್ದರಿಂದ 2 ನೇ ಕಾರಣ ಕೇಳುವ ನೋಟಿಸ್ ಜಾರಿ ಮಾಡಲಾಗಿತ್ತು. ಸದರಿ 2 ನೇ ಕಾರಣ ಕೇಳುವ ನೋಟಿಸ್‌ಗೆ **ಶ್ರೀ ರವಿಕುಮಾರ್** ಇಲಾಖಾ ವಿಚಾರಣೆ ವೇಳೆಯಲ್ಲಿ ವಿಚಾರಣಾಧಿಕಾರಿಗಳ ಮುಂದೆ ಸಲ್ಲಿಸಿದ ಹೇಳಿಕೆಯನ್ನೇ ಪುನರುಚ್ಚರಿಸಲಾಗಿದೆಯೆಂದು, ಪ್ರಶ್ನಿತ ಕಾಮಗಾರಿಯನ್ನು ದಿನಾಂಕ:18.12.2012 ರಂದು ಪ್ರಾರಂಭಿಸಿ ದಿನಾಂಕ:15.3.2013 ರಂದು ಮುಕ್ತಾಯಗೊಳಿಸಿದ್ದು, ಅಂದಾಜು ಪಟ್ಟಿಯಲ್ಲಿ ಅಳವಡಿಸಿದ ಅಂಶಗಳಂತೆ ಕಾಮಗಾರಿಯನ್ನು ಅನುಷ್ಠಾನಗೊಳಿಸಿ ಪೂರ್ಣಗೊಳಿಸಲಾಗಿದೆಯೆಂದು, ಕಾಮಗಾರಿಯನ್ನು ನಿರ್ವಹಿಸುವಲ್ಲಿ ಯಾವುದೇ ಕರ್ತವ್ಯ ನಿರ್ಲಕ್ಷತನ ತೋರಿಸಿರುವುದಿಲ್ಲವೆಂದು ತಿಳಿಸಿ ಆರೋಪವನ್ನು ಕೈ ಬಿಡುವಂತೆ ಕೋರಿರುತ್ತಾರೆ.

ಸರ್ಕಾರವು ವಿಚಾರಣಾ ವರದಿ, ಸಂಬಂಧಿಸಿದ ತನಿಖಾ ವರದಿಗಳು, ಆಪಾದಿತರ ಹೇಳಿಕೆಗಳನ್ನು ಪರಿಶೀಲಿಸಿದ್ದು, ಶ್ರೀ ಶೇಖರಪ್ಪ ರಾಜ್ಯ ಗುಣ ನಿಯಂತ್ರಣ ಮಾನಿಟರ್ ಇವರು ಕಾಮಗಾರಿಯನ್ನು ದಿನಾಂಕ:05.10.2015 ರಂದು ತಪಾಸಣೆ ನಡೆಸಿದ್ದು, ಅ ಸಂದರ್ಭದಲ್ಲಿ ಅಳತೆ ಪುಸ್ತಕದಲ್ಲಿ 800 ಮೀಟರ್ ಉದ್ದ ಡಾಂಬರೀಕರಣ ಮಾಡಿರುವುದನ್ನು ನಮೂದಿಸಲಾಗಿದ್ದು, ವಾಸ್ತವವಾಗಿ 420 ಮೀಟರ್ ಮಾತ್ರ ಡಾಂಬರೀಕರಣ ಮಾಡಿರುವುದು ಕಂಡು ಬಂದಿರುತ್ತದೆ. ಉಳಿದ 380 ಮೀಟರ್ ಉದ್ದಕ್ಕೆ ಡಾಂಬರೀಕರಣ ಮಾಡಲು ಗ್ರಾಮಸ್ಥರು ತಡೆದ ಕಾರಣ ಡಾಂಬರೀಕರಣ ಮಾಡಿರುವುದಿಲ್ಲ. ಅದರೆ ಅದರ ಬಾಬ್ತು 2,03,279/- ಗಳನ್ನು ಗುತ್ತಿಗೆದಾರರಿಗೆ ದಿನಾಂಕ:06.2.2014 ರಂದೇ ಪಾವತಿಸಲಾಗಿರುತ್ತದೆ. ನಂತರ ಶ್ರೀ ಬಸವರಾಜ ಮಳಿಮಠ ಇವರು ಸದರಿ ಕಾಮಗಾರಿಯನ್ನು ತಪಾಸಣೆ ನಡಸಿ ದಿನಾಂಕ:16.5.2016 ರಂದು ವರದಿ ಸಲ್ಲಿಸಿದ್ದು, ಆ ಸಂದರ್ಭದಲ್ಲಿ 380 ಮೀಟರ್ ರಸ್ತೆಯ ಡಾಂಬರೀಕರಣ ಪೂರ್ಣಗೊಂಡಿರುವುದು ಕಂಡು ಬರುತ್ತದೆ. ಮೇಲಿನ ಅಂಶಗಳನ್ನು ಗಮನಿಸಲಾಗಿ, ಆರೋಪಿತ ಅಧಿಕಾರಿ/ನೌಕರರು 800 ಮೀಟರ್ ಡಾಂಬರೀಕರಣದ ಪೈಕಿ 420 ಮೀಟರ್ ಡಾಂಬರೀಕರಣವನ್ನು ಮಾತ್ರ ಮಾಡಿದ್ದು, ಪೂರ್ಣ 800 ಮೀಟರ್‌ಗೆ ದಿನಾಂಕ:6.2.2014 ರಂದು ಹಣ ಪಾವತಿ ಮಾಡಿರುತ್ತಾರೆ. ಆರೋಪಗಳು ಕೇಳಿ ಬಂದ ನಂತರ ಉಳಿದ 380 ಮೀಟರ್ ಡಾಂಬರೀಕರಣವನ್ನು ಮಾಡಿರುತ್ತಾರೆ. ಇದರಿಂದಾಗಿ, ಪೂರ್ಣ ಪ್ರಮಾಣದ ಕಾಮಗಾರಿಯನ್ನು ಮಾಡದೇ ಪೂರ್ಣ ಹಣವನ್ನು ಗುತ್ತಿಗೆದಾರರಿಗೆ ಪಾವತಿಸಿ, ರೂ. 2,03,979/- ಗಳ ತಾತ್ಕಾಲಿಕ ಹಣ ದುರುಪಯೋಗಕ್ಕೆ ಕಾರಣರಾಗಿರುವ ಆರೋಪವು ಶ್ರೀ ರವಿಕುಮಾರ್ ಇವರ ವಿರುದ್ಧ ಸಾಭೀತಾಗಿರುತ್ತದೆ. ಆದ್ದರಿಂದ, ಸದರಿಯವರ ವಿರುದ್ಧ ಸಾಭೀತಾದ ಆರೋಪಗಳಿಗೆ ಅನುಗುಣವಾಗಿ ದಂಡನೆ ವಿಧಿಸಲು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ, ಈ ಆದೇಶ.

**ಆದೇಶ ಸಂಖ್ಯೆ: ಗ್ರಾಅಪ 59 ಇಎನ್‌ಕ್ಯೂ 2016, ಬೆಂಗಳೂರು, ದಿನಾಂಕ:10.01.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಸರ್ಕಾರವು ಶ್ರೀ ರವಿಕುಮಾರ್, ಕಿರಿಯ ಇಂಜನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಗಂಗಾವತಿ ಇವರ ವಿರುದ್ಧ ಇಲಾಖಾ ವಿಚಾರಣೆಯಲ್ಲಿ ಸಾಭೀತಾದ ಆರೋಪಗಳಿಗೆ ಅನುಗುಣವಾಗಿ ಕರ್ನಾಟಕ ನಾಗರೀಕ ಸೇವಾ (ನಿಯಮಗಳು) 1957 ರ ನಿಯಮ 8 (iii) ರ ಅನುಸಾರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಯಿಡಿಯುವ ದಂಡನೆ ವಿಧಿಸಿ ಆದೇಶಿಸಿದೆ.

ಸದರಿ ದಂಡನೆಯನ್ನು ಅನುಷ್ಠಾನಗೊಳಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರಿಗೆ ಸೂಚಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
10/01/2020
(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

10/01

**ಇವರಿಗೆ:**

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ/ಜಲ ಸಂಪನ್ಮೂಲ ಇಲಾಖೆ/ ಸಣ್ಣ ನೀರಾವರಿ ಇಲಾಖೆ,
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
6. ಶ್ರೀ ರವಿಕುಮಾರ್, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಗಂಗಾವತಿ.
7. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು.
8. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಉಪ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
9. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.